ಸಭೆಯು ಹಾಗೂ ೧೯೫೨ರಿಂದ ೧೯೫೬ರ ತನಕ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಅಲ್ಲದೆ ಪ್ರಸಿದ್ಧ ವಕೀಲರೂ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಹಿಂದುಳಿದ ವರ್ಗಗಳ ಏಳಿಗೆಗಾಗಿ ಶ್ರಮಿಸಿದ್ದರು.

ಶ್ರೀ ಶಂಕರ್‌ದೇವ್ ಇವರು ದಿನಾಂಕ ೧೨-೮ ೧೯೮೬ರಂದು ನಿಧನರಾದರು. ಶ್ರೀಯುತರು ೧೯೫೬ರಿಂದ ೧೯೫೭ರ ತನಕ ಕರ್ನಾಟಕ ವಿಧಾನಸಭೆಯ ಸದಸ್ಯರಾಗಿದ್ದರು. ಹೈದರಾಬಾದ್ ರಾಜ್ಯ ಸರ್ಕಾರದಲ್ಲಿ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರು. ಇವರು ಎರಡು ಬಾರಿ ಲೋಕಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು.

ಮಾಜಿ ಸೇನಾ ಮಹಾ ದಂಡನಾಯಕ ಶ್ರೀ ಅರುಣ್‌ಕುಮಾರ್ ಶ್ರೀಧರ್ ವೈದ್ಯ ಅವರು ದಿನಾಂಕ ೧೦-೮-೧೯೮೬ರಂದು ಪುಣೆಯಲ್ಲಿ ಹಂತಕರ ಗುಂಡೇಟಿಗೆ ಬಲಿಯಾದರು. ಅವರು ೧೯೫೫ನೇ ಜನವರಿ ೨೦ರಂದು ಸೇನೆಗೆ ಸೇರಿ ೧೯೮೬ನೇ ಜನವರಿ ೩೧ರಂದು ಭಾರತದ ಭೂ ಸೇನೆಯ ಪ್ರಧಾನಿಯ ಮಹಾ ಸೇನಾ ದಂಡನಾಯಕರಾಗಿ ನಿವೃತ್ತರಾದರು. ಶ್ರೀಯುತರು ಸಮರ್ಥ ದಕ್ಷ ಅಧಿಕಾರಿಗಳಲ್ಲೊಬ್ಬರಾಗಿದ್ದರು. ೧೯೭೫ರ ಭಾರತ ಪಾಕ್ ಸಮರದ ಸಮಯದಲ್ಲಿ ಅವರು ತೋರಿದ ಶೌರ್ಯಕ್ಕಾಗಿ ಅವರಿಗೆ ಮಹಾವೀರ ಚಕ್ರ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಹಾಗೂ ೧೯೭೧ರ ಸಮರದ ಸಮಯದಲ್ಲೂ ಅವರಿಗೆ ಎರಡನೆಯ ಬಾರಿ ಮಹಾವೀರ ಚಕ್ರ ಪ್ರಶಸ್ತಿ ಲಭಿಸಿತ್ತು. ನಿಧನ ಹೊಂದಿದ ಗಣ್ಯ ವ್ಯಕ್ತಿಗಳ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿತು)

ಅಧ್ಯಕ್ಷರು— ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರುಗಳ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು. ಇನ್ನು ಮುಂದೆ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು
ಏತ ನೀರಾವರಿ ನಿಗಮದ ಕುರಿತು

೧೧. ಶ್ರೀ ಬಾಬುರೆಡ್ಡಿ ವೆಂ. ತುಂಗಳ್(ಬೀಳಗಿ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಗಾಗಿಯೇ ಪ್ರತ್ಯೇಕವಾದ ಏತ ನೀರಾವರಿ ನಿಗಮವೊಂದನ್ನು ಸರಕಾರದವರು ಅಧಿಕೃತವಾಗಿ ಘೋಷಿಸಿದ್ದಾರೆಯೇ?

ಆ) ಹಾಗಿದ್ದಲ್ಲಿ, ಈ ನಿಗಮದ ಕಾರ್ಯವ್ಯಾಪ್ತಿಯೇನು?

ಇ) ಈ ನಿಗಮಕ್ಕೆ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡುವ ವಿಚಾರ ಸರಕಾರದವರ ಪರಿಶೀಲನೆಯಲ್ಲಿದೆಯೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)—

ಅ) ಇಲ್ಲ ಆದರೆ ಕೃಷ್ಣಾ ಜಲಾನಯನ ಪ್ರದೇಶದ ಏತ ನೀರಾವರಿ ನಿಗಮದ ಕೇಂದ್ರ ಕಛೇರಿಯನ್ನು ವಿಜಾಪುರದಲ್ಲಿ ತೆರೆಯಲಾಗಿದೆ.

ಆ) ಕೃಷ್ಣಾ ಜಲಾನಯನ ಪ್ರದೇಶದ ಏತ ನೀರಾವರಿ ನಿಗಮದ ವ್ಯಾಪ್ತಿಗೆ ಶಿವಮೊಗ್ಗ, ಚಿತ್ರದುರ್ಗ, ಉತ್ತರ ಕನ್ನಡ, ಬೆಳಗಾವಿ, ವಿಜಾಪುರ, ಧಾರವಾಡ ಗುಲ್ಬರ್ಗಾ, ಬೀದರ್, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳು ಒಳಪಡುತ್ತವೆ.

ಇ) ಪರಿಶೀಲನೆಯಲ್ಲಿದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್—ಮಾನ್ಯ ಅಧ್ಯಕ್ಷರೇ ಏತ ನೀರಾವರಿಗಾಗಿ ಕೃಷ್ಣಾ ಮತ್ತು ಕಾವೇರಿ ಬೇಸಿನ್‌ಗೆ ಪ್ರತ್ಯೇಕವಾದಂಥ ಒಂದು ಕಾರ್ಪೊರೇಷನ್ ಅನ್ನು ಸ್ಥಾಪನೆ ಮಾಡಿರುವುದಕ್ಕಾಗಿ ನಿಜವಾ

ಗಿಯೂ ಈ ಕೆಲಸಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಆದರೆ ಒಂದು ವಿಚಾರ ಏನು ಬರುತ್ತದೆ ಎಂದರೆ, ಈ ರೀತಿ ಸಣ್ಣ ಸಣ್ಣ ಏತ ನೀರಾವರಿಯನ್ನು ಕೈಗೊಂಡಾಗ, ಐದು ನದಿಗಳು ಹರಿಯುತ್ತಿರುವ ನಮ್ಮ ಜಿಲ್ಲೆಯಲ್ಲಿ ಅಲ್ಲಲ್ಲಿ ಈ ಯೋಜನೆಯನ್ನು ಮಾಡಿದರೆ ಸಾಲದು. ಇದು ಕೇವಲ ತತ್ವದ ಮೇಲೆ ಅವಲಂಬಿತವಾಗಬಾರದು. ಒಂದು ಎಕರೆಗೆ ಐದು ನೂರು ರೂಪಾಯಿಗಳನ್ನು ಕೊಡುವುದಕ್ಕೆ ಜನರು ತಯಾರಾಗಿ ಬಂದಿದ್ದಾರೆ. ಈಗಾಗಲೇ ಮುಖ್ಯಮಂತ್ರಿಗಳಿಗೆ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಬೇಕಾದರೆ ಇನ್ನೂ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ಕೆಲಸ ತಂತಾನೆ ಆಗಬೇಕಾದರೆ ಈ ಏತ ನೀರಾವರಿ ನಿಗಮದಲ್ಲಿ ಆಸಕ್ತಿಯಿರುವ ಶಾಸಕರು ಸಹ ಇದ್ದರೆ ಕೆಲಸ ತೀವ್ರವಾಗಿ ನಡೆಯುತ್ತದೆ ಮತ್ತು ಸರ್ಕಾರಕ್ಕೂ ಹೆಚ್ಚಿನ ಬೆಲೆ ಬರುತ್ತದೆ. ಆದ್ದರಿಂದ ಈ ಒಂದು ಕಾರ್ಪೊರೇಷನ್‌ನಲ್ಲಿ ಅಧಿಕಾರೇತರ ಸದಸ್ಯರೂ ಕೂಡ ಇರಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಯಲ್ಲಿ ಎರಡು ವಿಚಾರಗಳು ಉದ್ಭವವಾಗುತ್ತವೆಂದು ನಾನು ಭಾವಿಸುತ್ತೇನೆ. ಈ ಏತ ನೀರಾವರಿ ನಿಗಮವನ್ನು ರಚನೆ ಮಾಡಬೇಕೆಂಬ ಉದ್ದೇಶವನ್ನು ನಾವು ಇಟ್ಟುಕೊಂಡಿರುವುದು ಏತಕ್ಕಿಂದರೆ. ನಮ್ಮ ರಾಜ್ಯದಲ್ಲಿರುವ ಎರಡು ಮುಖ್ಯ ನದಿಗಳಾದ ಕಾವೇರಿ ಮತ್ತು ಕೃಷ್ಣಾ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕೆಂದು ಈ ನದಿಗಳಿಗೆ ಸಂಬಂಧಪಟ್ಟಂತೆ ಎರಡು ಪ್ರತ್ಯೇಕ ನಿಗಮಗಳನ್ನು ರಚನೆ ಮಾಡಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಈ ನಿಗಮಗಳಿಗೆ ಯಾವ ಯಾವ ಕೆಲಸಗಳನ್ನು ಕೊಡಬೇಕೆಂಬುದು ಇನ್ನೂ ಸರ್ಕಾರದ ಪರಿಶೀಲನೆ ಹಂತದಲ್ಲಿದೆ. ಏಕೆಂದರೆ, ಮುಂದೆ ಜಿಲ್ಲಾ ಪರಿಷತ್ ರಚನೆಯಾದ ಮೇಲೆ ೫ ಸಾವಿರ ಹೆಕ್ಟೇರ್‌ಗಿಂತ ಕೆಳಗೆ ಇರುವಂತಹ ಏತ ನೀರಾವರಿ ಯೋಜನೆಗಳು ಹಾಗೂ ಗಂಗಾಕಲ್ಯಾಣ ಯೋಜನೆಗಳು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುತ್ತವೆ. ಆದ್ದರಿಂದ ಇದು ಒಂದಕ್ಕೊಂದು ವಿರೋಧಾಭಾಸವಾಗದಂತೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ಬರಾಜ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಅದು ಏತ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಈ ನಿಗಮಗಳನ್ನು ರಚನೆ ಮಾಡತಕ್ಕಂಥ ಉದ್ದೇಶವೆಂದರೆ, to find out financial resources from external agencies, ಅಂದರೆ ಯಾವುದಾದರೂ ಆರ್ಥಿಕ ಸಂಸ್ಥೆಗಳಿಂದ ಹಣವನ್ನು ಪಡೆದುಕೊಳ್ಳುವುದಕ್ಕಾಗಿ ಇದನ್ನು ಮಾಡಿರುವುದು. ಈ ನಿಗಮವನ್ನು ರಚನೆ ಮಾಡಿದ ಕೂಡಲೇ ಹಣ ಬರುತ್ತದೆಂದು ಹೇಳುವುದು ಕಷ್ಟವಾಗುತ್ತದೆ. ಈಗ ಗುಜರಾತ್‌ನಲ್ಲಿ ಇಂತಹ ಒಂದು ನಿಗಮವಿದೆ. ಅದು ಯಾವ ರೀತಿ ಕೆಲಸ ಮಾಡುತ್ತಿದೆ ಮತ್ತು ಬಂಡವಾಳವನ್ನು ಯಾವ ರೀತಿ ಕೊಡಿಸುತ್ತಿದೆ ಎಂಬುದನ್ನು ನಾವು ಪರಿಶೀಲನೆ ಮಾಡಿ ನೋಡುತ್ತಿದ್ದೇವೆ. ೫ ಕೋಟಿ ರೂಪಾಯಿಗಳ ಷೇರು ಬಂಡವಾಳವನ್ನು ಇದಕ್ಕೆ ಹೂಡಬೇಕೆಂದು ಮಾನ್ಯ ಸದಸ್ಯರು ಸೂಚ್ಯವಾಗಿ ತಿಳಿಸಿದ್ದಾರೆ. ಈಗ ರಚನೆಯಾಗಿರುವ ಎರಡು ನಿಗಮಗಳಿಗೆ ೫೦ ಲಕ್ಷ ರೂಪಾಯಿಗಳ ಪ್ರಕಾರ ಒಂದೊಂದು ನಿಗಮಕ್ಕೆ ಹಣ ಕೊಡಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದರಲ್ಲಿ ಮೂರು ಜನ ಖಾಸಗೀ ಸದಸ್ಯರು ಇರುತ್ತಾರೆ. ಫೈನಾನ್ಸ್ ಕಮೀಷನರ್, ಪ್ಲಾನಿಂಗ್ ಸೆಕ್ರೆಟರಿ, ಡೆವೆಲಪ್‌ಮೆಂಟ್ ಕಮೀಷನರ್ ಹೀಗೆ ಸರ್ಕಾರದ ಉನ್ನತಮಟ್ಟದ ಅಧಿಕಾರಿಗಳಿಂ ಇದರಲ್ಲಿರುತ್ತಾರೆ. ಈ ನಿಗಮದ ಒಂದು ರೂಪರೇಷ ಅಂತಿಮವಾಗಿ ತೀರ್ಮಾನವಾಗುವವರೆಗೆ ನೀರಾವರಿ ಮಂತ್ರಿಗಳೇ ಇದರ ಅಧ್ಯಕ್ಷರಾಗಿರುತ್ತಾರೆ. ಈಗ ಇದು ಪ್ರಿಲಿಮಿನರಿ ಸ್ಟೇಜ್‌ನಲ್ಲಿದೆ. ಮುಂದೆ ಬೇಕಾದರೆ ನೀರಾವರಿ ಮಂತ್ರಿಗಳ ಜಾಗದಲ್ಲಿ ಬೇರೆ ಯಾರನ್ನಾದರೂ ನೇಮಕ ಮಾಡಬಹುದು. ಅಲ್ಲಿಯವರೆಗೆ ನೀರಾವರಿ ಮಂತ್ರಿಗಳೇ ಇದರ ಅಧ್ಯಕ್ಷರಾಗಿರುತ್ತಾರೆ. ಈ ನೀರಾವರಿ ಸೌಲಭ್ಯ ಪಡೆದುಕೊಳ್ಳುವಂತಹ ರೈತರು ಎಕರೆಗೆ ೫೦೦ ರೂಪಾಯಿಗಳ ಪ್ರಕಾರ ಅಡ್ವಾನ್ಸ್ ಕೊಡಲು ಮುಂದೆ ಬಂದರೆ, ಅಂತಹವರ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ಸಹ ನಾವು ಪರ್ಯಾಲೋಚನೆ ಮಾಡುತ್ತಿದ್ದೇವೆ. ಎಲ್ಲೆಲ್ಲಿ ರೈತರು ಸ್ವತಃ ನೀರಿನ ಬಳಕೆ ಮಾಡಿಕೊಳ್ಳುವ ಒಂದು ಸದುದ್ದೇಶದಿಂದ ಮುಂದೆ ಬಂದು, ಒಟ್ಟು ಖರ್ಚಿನಲ್ಲಿ ೫ಕಡ ೨೫ರಷ್ಟು ಹಣವನ್ನು ಕೂಡಿಸಿಕೊಡುತ್ತಾರೋ. ಅಂತಹ ಕೆಲಸಗಳಿಗೆ ಪ್ರಥಮ ಆದ್ಯತೆ ಕೊಡಬೇಕೆಂಬುದು ಸರ್ಕಾರದ ಗಮನದಲ್ಲಿದೆ. ಶೇಕಡ ೨೫ ರಷ್ಟು ಹಣವನ್ನು ಕೊಡಲು ಯಾರು ಮುಂದೆ ಬರುತ್ತಾರೋ

ಅಂತಹ ಕೆಲಸಗಳಿಗೆ ಬಜೆಟ್‌ನಲ್ಲಿ ಮೊದಲ ಆದ್ಯತೆ ಕೊಟ್ಟು, ನಮ್ಮ ನೀರಾವರಿ ಇಲಾಖೆಯ ಮೂಲಕವೇ ಆ ಕೆಲಸವನ್ನು ಮಾಡಿ ಮುಗಿಸಬೇಕೆಂದಿದ್ದೇವೆ. ಈ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎ. ಕರಿಯಗೌಡ ಪಾಟೀಲ್.—ಮುಳವಾಡ ಏತ ನೀರಾವರಿ ಯೋಜನೆ ಸಹ ಇದರ ಒಂದು ವ್ಯಾಪ್ತಿಯಲ್ಲಿ ಬರುತ್ತದೆಯೇ ?

ಶ್ರೀ ಹೆಚ್ ಡಿ. ದೇವೇಗೌಡ.—ಬೃಹತ್ ನೀರಾವರಿ ಯೋಜನೆಗಳ ವ್ಯಾಪ್ತಿಯಲ್ಲಿ ಈ ಯೋಜನೆ ಬರುತ್ತದೆ. ಅಪ್ಪರ್-ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವಂತಹ ಏತ ನೀರಾವರಿ ಯೋಜನೆಗಳನ್ನು ಕೈ ಕೊಳ್ಳಲು ಬೇಕಾದಂಥ ೪೫೦ ಕೋಟಿ ರೂಪಾಯಿಗಳನ್ನು ಪಡೆದುಕೊಳ್ಳಲು ನಮ್ಮ ಒಂದು ಅರಿಕೆಯನ್ನು ವಿಶ್ವಬ್ಯಾಂಕ್ ಮುಂದೆ ಮಂಡನೆ ಮಾಡಿರುವುದರಲ್ಲಿ ಈ ಯೋಜನೆ ಸಹ ಸೇರಿದೆ. ಇದರ ಒಂದು ಕೆಲಸವನ್ನು ಪ್ರಾರಂಭ ಮಾಡುವಾಗ ಇದನ್ನು ಏತ ನೀರಾವರಿ ನಿಗಮದ ಮೂಲಕ ಮಾಡಿಸಬೇಕೇ ಅಥವಾ ಮೇಜರ್ ಇರಿಗೇಷನ್ ಇಲಾಖೆ ಮೂಲಕ ಮಾಡಿಸಬೇಕೇ ಎಂಬ ಬಗ್ಗೆ ಒಂದು ನಿರ್ಣಯವನ್ನೂ ಕೈ ಗೊಳ್ಳಲಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಈ ಏತ ನೀರಾವರಿ ನಿಗಮವನ್ನು ಬಹಳ ವರ್ಷಗಳಿಂದ ಯೋಚನೆ ಮಾಡಿ ಈಗ ರಚನೆ ಮಾಡಿರುವುದು. ಈಗ ಒಂದು ಎಕರೆಗೆ ೮ ರಿಂದ ಹತ್ತು ಸಾವಿರ ರೂಪಾಯಿಗಳವರೆಗೆ ಹಣ ಖರ್ಚು ಮಾಡಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈ ಗೊಂಡು ಅಣೆಕಟ್ಟುಗಳನ್ನು ಕಟ್ಟಿಸಿ, ರೈತರಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡುತ್ತಿರುವ ರೀತಿಯಲ್ಲಿಯೇ ಏತ ನೀರಾವರಿ ಯೋಜನೆಗಳ ಕೆಲಸವನ್ನು ಸಹ ಸರ್ಕಾರದ ಖರ್ಚಿನಲ್ಲಿಯೇ ಏತಕ್ಕೆ ಮಾಡಬಾರದು ? ಬಯಲು ಪ್ರದೇಶಗಳಲ್ಲಿ, ಡ್ರೈ ಲ್ಯಾಂಡ್ ಇರುವ ಕಡೆಗಳಲ್ಲಿ ಸರ್ಕಾರದ ಖರ್ಚಿನಲ್ಲಿ ಅಣೆಕಟ್ಟುಗಳನ್ನು ಕಟ್ಟಿಸಿ, ಪುಕ್ಕಟೆಯಾಗಿ ಕೃಷಿಕಾರರಿಗೆ ನೀರನ್ನು ಒದಗಿಸುವ ರೀತಿಯಲ್ಲಿಯೇ ಏತ ನೀರಾವರಿ ಯೋಜನೆಗಳ ಕೆಲಸವನ್ನು ಸಹ ಏತಕ್ಕೆ ಕೈ ಕೊಳ್ಳಬಾರದು ?

ಶ್ರೀ ಎಚ್ ಡಿ. ದೇವೇಗೌಡ.—ಮಾನ್ಯ ಸದಸ್ಯರು ಸರ್ಕಾರದ ನೀತಿಯ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಈಗ ನಾನು ಉತ್ತರ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ರಾಜ್ಯದಲ್ಲಿ ಶಾಲಾ ಮಕ್ಕಳಿಗೆ ವಿತರಣೆ ಮಾಡುತ್ತಿರುವ ಪೌಷ್ಟಿಕ ಆಹಾರ

೨೮೩. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಶಾಲಾ ಮಕ್ಕಳಿಗೆ ವಿತರಣೆ ಮಾಡುತ್ತಿರುವ ಪೌಷ್ಟಿಕ ಆಹಾರ ಎಲ್ಲೆಲ್ಲಿ ತಯಾರಾಗುತ್ತಿದೆ.

ಆ) ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯಿಂದ ಇದನ್ನು ಪರೀಕ್ಷಿಸಲಾಗಿದೆಯೇ,

ಇ) ಪೌಷ್ಟಿಕಾಂಶದ ಆಹಾರದಲ್ಲಿ ಯಾವ ಯಾವ ಅಂಶಗಳು ಸೇರಿವೆ,

ಈ) ವಿತರಣೆ ಏಜೆನ್ಸಿ ಯಾವ ಆಧಾರದ ಮೇಲೆ ಸರ್ಕಾರ ನೀಡಿದೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಮೈಸೂರು, ಬೆಳಗಾಂ, ಚಿತ್ರದುರ್ಗ ಮತ್ತು ರಾಯಚೂರು.

ಆ) ಹೌದು. ಈ ಆಹಾರ, ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯವರೇ ರೂಪಿಸಿದ್ದಾರೆ.

ಇ) ಜೀವಸತ್ವ ಎ, ಬಿ ೧, ಬಿ ೨, ನಿಕ್ಕಾಶಿನ್, ಫೋಲಿಕ್ ಆಸಿಡ್, ಇವುಗಳನ್ನು ಉಳ್ಳ ಗೋಧಿ ಶೇಂಗಾ, ಬೇಳೆಗಳು ಮತ್ತು ಬೆಲ್ಲ ಸೇರಿವೆ

ಈ) ಸರ್ಕಾರಿ ಸ್ವಾಮ್ಯದ ರಾಜ್ಯ ಅಗ್ರೋಕಾರನ್ಸ್ ಫ್ರಾಡಕ್ಟ್ಸ್ ಇವರಿಗೆ ಲಾಭ ನಷ್ಟಗಳ ಆಧಾರವಿಲ್ಲದೆ, ವಿತರಣೆ ಜವಾಬ್ದಾರಿಯನ್ನು ನೀಡಿದೆ.